

ಟೂರ್ನಿ ನಡೆದಿದ್ದಾಗ ಭಾರತದ ವೇಗದ ಬೌಲಿಂಗ್ ಪಡೆಯ ನೇತೃತ್ವ ವಹಿಸಿದ್ದವರು ಶಮಿ. ಆಗ ಸೆಮಿಫೈನಲ್ ಪ್ರವೇಶಿಸುವ ಮೊದಲು ಎದುರಾಳಿ ತಂಡಗಳ ಒಟ್ಟು 77 ವಿಕೆಟ್‌ಗಳನ್ನು ಭಾರತ ಪಡೆದಿತ್ತೆನ್ನುವುದು ಸ್ಮರಣೀಯ. ಯಾಕೆಂದರೆ, 80ರಲ್ಲಿ ಅಷ್ಟೊಂದು ವಿಕೆಟ್‌ಗಳನ್ನು ಗಳಿಸಿದ್ದೇ ಬೌಲಿಂಗ್ ಪಡೆ ಶ್ರೇಷ್ಠವಾಗಿತ್ತು ಎನ್ನುವುದಕ್ಕೆ ಸಾಕ್ಷಿ. ಆ ವಿಕೆಟ್‌ಗಳಲ್ಲಿ ಶಮಿ ಖಾತೆಗೆ 17 ಹಾಗೂ ಉಮೇಶ್ ಯಾದವ್ ಬುಟ್ಟಿಗೆ 18 ವಿಕೆಟ್‌ಗಳು ಬಿದ್ದಿದ್ದವು. ಅಂದರೆ, ಒಟ್ಟಾರೆ ವಿಕೆಟ್‌ಗಳಲ್ಲಿ ಹತ್ತಿರ ಹತ್ತಿರ ಅರ್ಧದಷ್ಟು ವಿಕೆಟ್‌ಗಳು ಈ ಇಬ್ಬರಿಗೇ ಸಂದಿದ್ದವು ಎಂದರ್ಥ. ಹಳೆಯ, ಹೊಸ ಚೆಂಡನ್ನು ಈ ಇಬ್ಬರೂ ಸ್ವಿಂಗ್ ಮಾಡುತ್ತಿದ್ದ ರೀತಿಗೆ ಆಗಲೂ ಮೆಚ್ಚುಗೆ ವ್ಯಕ್ತವಾಗಿತ್ತು.

ಶಮಿ ಆ ವಿಶ್ವಕಪ್ ಶುರುವಾಗುವ ಎರಡು ವರ್ಷಗಳ ಮೊದಲಷ್ಟೇ ಭಾರತದ ಅಂತರರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶ ಪಡೆದದ್ದು. ಭೌಗೋಳಿಕವಾಗಿ ಉತ್ತರಪ್ರದೇಶಕ್ಕೆ ಸೇರಿದ್ದರೂ, ಈ ಬೌಲರ್ ದೇಸಿ ಕ್ರಿಕೆಟ್ ಆಡಿದ್ದು ಬಂಗಾಳ ತಂಡದ ಪರವಾಗಿ. ಗುರುತಿಸಿದ್ದು ಆ ಭಾಗದವರು ಎನ್ನುವುದು ಇದಕ್ಕೆ ಕಾರಣ. ಬರೀ 15 ಪ್ರಥಮ ದರ್ಜೆ ಪಂದ್ಯಗಳನ್ನು ಹಾಗೂ ಅಷ್ಟೇ ಸಂಖ್ಯೆಯ ಲಿಸ್ಟ್ 'ಎ' ಪಂದ್ಯಗಳನ್ನು ಆಡಿದ ನಂತರ ಭಾರತದ ಅಂತರರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದದ್ದು ವಿಶೇಷ. 2013ರಲ್ಲಿ ಪಾಕಿಸ್ತಾನದ ಎದುರು ಏಕದಿನ ಪಂದ್ಯಕ್ಕೆ ಪದಾರ್ಪಣೆ ಮಾಡಿದರು. 9–4–23–1 — ಆ ಪಂದ್ಯದಲ್ಲಿ ಶಮಿ ಬೌಲಿಂಗ್ ಅಂಕಿಅಂಶ ಹೀಗಿತ್ತು. ಮೊದಲ ಪಂದ್ಯದಲ್ಲೇ ನಾಲ್ಕು ಮೇಡನ್ ಮಾಡಿದ ವಿಶ್ವದ ಎಂಟನೇ ಬೌಲರ್ ಎನ್ನುವ ಹೆಗ್ಗಳಿಕೆ. ಅದಕ್ಕಿಂತ ಮುಖ್ಯವಾಗಿ ಅಂತಹ ಸಾಧನೆ ಮಾಡಿದ ಭಾರತದ ಮೊದಲ ಬೌಲರ್ ಎನ್ನುವ ಗರಿಮೆ. ಅದೇ ವರ್ಷ ಟೆಸ್ಟ್ ಕ್ರಿಕೆಟ್‌ಗೆ ಕಾಲಿಟ್ಟಿದ್ದು ವೆಸ್ಟ್‌ಇಂಡೀಸ್ ವಿರುದ್ಧದ ಸರಣಿಯಲ್ಲಿ. ಎರಡು ಪಂದ್ಯಗಳಿಂದ 11 ವಿಕೆಟ್‌ಗಳನ್ನು ಪಡೆದ ಮೇಲೆ ಇವರ ರಿವರ್ಸ್ ಸ್ವಿಂಗ್ ಬೌಲಿಂಗ್ ಎಷ್ಟು ಪರಿಣಾಮಕಾರಿ ಎನ್ನುವುದು ಸ್ಪಷ್ಟವಾಯಿತು.

2015ರ ವಿಶ್ವಕಪ್ ನಂತರ ಶಮಿ ಪಾಲಿಗೆ ಕಷ್ಟದ ದಿನಗಳು ಎದುರಾದವು. ಮೊಣಕಾಲಿನ ನೋವಿನಿಂದ ಸುದೀರ್ಘಾವಧಿ ಆಡಿದ್ದರಿಂದ, ಆಮೇಲೆ ಸುಧಾರಿಸಿಕೊಳ್ಳಲು ತಿಂಗಳುಗಟ್ಟಲೆ ಬೇಕಾಯಿತು. 2016ರಲ್ಲಿ ಇನ್ನೇನು ಆಡಬೇಕು ಎಂದುಕೊಳ್ಳುವಷ್ಟರಲ್ಲಿ ಸ್ನಾಯುಸೆಳೆತ ಕಾಡಿತು. ಆಸ್ಟ್ರೇಲಿಯಾ ಎದುರು ಆಡಲು ಆಗಲಿಲ್ಲ. ಏಷ್ಯಾ ಕಪ್ ಪಂದ್ಯಗಳಲ್ಲಿಯೂ ಆಡದೇ ಹೊರಗೆ ಉಳಿಯಬೇಕಾಯಿತು. ಟ್ವೆಂಟಿ 20 ವಿಶ್ವಕಪ್ ತಂಡಕ್ಕೆ ಆಯ್ಕೆಯಾದ 15 ಮಂದಿಯಲ್ಲಿ ಒಬ್ಬರಾಗಿ ಇದ್ದರೂ ಬೆಂಚ್ ಕಾಯಬೇಕಾಯಿತಷ್ಟೆ. ಸುಮಾರು ಒಂದು ವರ್ಷ ಆಡಲು ಆಗದೇ ಇದ್ದುದರ ಪರಿಣಾಮಗಳಿವು.

2012–13ರ ಋತುವಿನಲ್ಲಿ ರಣಜಿ ಕ್ರಿಕೆಟ್‌ನಲ್ಲಿ ಬರೀ ಐದು ಪಂದ್ಯಗಳಲ್ಲಿ ಶಮಿ 28 ವಿಕೆಟ್‌ಗಳನ್ನು ಪಡೆದಿದ್ದರು. ಹೈದರಾಬಾದ್ ಹಾಗೂ ಮಧ್ಯಪ್ರದೇಶ ತಂಡಗಳ ವಿರುದ್ಧದ ಪಂದ್ಯಗಳಲ್ಲಿ ಎರಡೂ ಇನಿಂಗ್ಸ್‌ಗಳಿಂದ ತಲಾ 10 ವಿಕೆಟ್‌ಗಳು ಸಂದಿದ್ದವು. ಚುಟುಕು ದೇಸಿ ಕ್ರಿಕೆಟ್ ಶುರುವಾದಾಗಲೂ ಮೊದಲ ಎಂಟು ಪಂದ್ಯಗಳಲ್ಲಿ 14 ವಿಕೆಟ್‌ಗಳನ್ನು ಪಡೆದು, ಅದಕ್ಕೂ ತಾವು ಸೈ ಎನ್ನುವುದನ್ನು ಸಾಬೀತು ಮಾಡಿದ್ದರು.

ಶಮಿ ನೆತ್ತಿಯ ಮೇಲೆ ಕೂದಲು ಕಡಿಮೆ. ವಯಸ್ಸು 33 ದಾಟಿದೆ. ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ವಯಸ್ಸೂ ಇಷ್ಟೇ. ಈ ಸಲದ ವಿಶ್ವಕಪ್‌ನಲ್ಲಿ ಸ್ಟಾರ್ಕ್ ದಣಿದಂತೆ ಕಂಡರೂ ಪ್ರಮುಖ ಘಟ್ಟದ ಪಂದ್ಯದಲ್ಲಿ ತಮ್ಮ ಅನುಭವವನ್ನು ಬೌಲಿಂಗ್‌ನಲ್ಲಿ ಕಾಣಿಸಿದರು. ಶಮಿ ಮೊದಲ ಪಂದ್ಯಗಳಲ್ಲಿ ಬೆಂಚ್ ಕಾಯ್ದಿದ್ದರು. ಆಮೇಲೆ ಬಂದವರೇ ತಮ್ಮ ರಿವರ್ಸ್ ಸ್ವಿಂಗ್‌ನ ಮೊನಚು ಹಾಗೆಯೇ ಇದೆ ಎನ್ನುವುದನ್ನು ಸಾಬೀತುಪಡಿಸಿದರು.

ಅಕ್ಟೋಬರ್ 29ರಂದು ನಡೆದ ಪಂದ್ಯದಲ್ಲಿ ಇಂಗ್ಲೆಂಡ್‌ನ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅವರನ್ನು ಹೇಗೆ ಇಕ್ಕಟ್ಟಿಗೆ ಸಿಲುಕಿಸಿದರು ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಆ ಪಂದ್ಯದಲ್ಲಿ ಸ್ಟೋಕ್ಸ್ ತಾವು ಆಡಿದ ಹತ್ತೂ ಎಸೆತಗಳನ್ನು ಶಮಿ ಹಾಕಿದ್ದರು. ನಾಲ್ಕನೇ ಸ್ಟಂಪ್‌ನತ್ತಲೇ ಗುರಿ ಮಾಡಿ, ಗುಡ್ ಲೆಂಗ್ತ್ ವಲಯದಲ್ಲೇ ಹಾಕುತ್ತಿದ್ದ ಶಮಿ, ಎಡಗೈ ಬ್ಯಾಟ್ಸ್‌ಮನ್‌ನಿಂದ ಹೊರಗೆ ಹೋಗುವಂತಹ ಸ್ವಿಂಗ್ ಪ್ರಯೋಗಿಸಿದರು. ಸ್ಟೋಕ್ಸ್ ದಾಳಿಕೋರ ಧೋರಣೆ ತೋರುತ್ತಿದ್ದಂತೆ, ಕ್ರೀಸ್‌ನ ಅಂಚಿನಿಂದ ಹಾಕಿದ ಒಂದು ಎಸೆತ ವಿಕೆಟ್‌ಗಳನ್ನು ಹಾರಿಸಿತು. ಮಾರ್ಕ್ ಕ್ರೇಗ್ 2016ರಲ್ಲಿ ಔಟಾದ ಎಸೆತದ ಸ್ವಿಂಗ್ ಕೂಡ ಇದೇ ರೀತಿ ಇತ್ತು.

ಈ ಸಲದ ವಿಶ್ವಕಪ್‌ನಲ್ಲಿ ಯಾರು ಎಷ್ಟು ವಿಕೆಟ್‌ಗಳನ್ನು ಪಡೆದಿದ್ದಾರೆ ಎನ್ನುವ ಪಟ್ಟಿಯ ಮೇಲೆ ಕಣ್ಣಾಡಿಸಿದರೆ, ಶಮಿ ರಿವರ್ಸ್ ಸ್ವಿಂಗ್‌ಗಳ ಕಥನಗಳೇ ಕಾಡುತ್ತವೆ. ಅದರಲ್ಲೂ ಸೆಮಿಫೈನಲ್‌ನಲ್ಲಿ ಒಂದೇ ಓವರ್‌ನಲ್ಲಿ ಎರಡು ವಿಕೆಟ್‌ಗಳನ್ನು ಎರಡೆರಡು ಸಲ ಪಡೆದ ಬೌಲಿಂಗ್ ಅವರ ಅನುಭವಕ್ಕೆ ಹಿಡಿದ ಕನ್ನಡಿ.

ಅವರು ವಿಶ್ವಕಪ್‌ನಲ್ಲಿ ಜಹೀರಾ ಖಾನ್ ಪಡೆದ ವಿಕೆಟ್ ಸಂಖ್ಯೆಗಳನ್ನು ಹಿಂದಿಕ್ಕಿದರು, ಅತಿ ವೇಗವಾಗಿ 50 ವಿಕೆಟ್‌ಗಳ ಗಡಿಯನ್ನು ವಿಶ್ವಕಪ್ ಪಂದ್ಯಗಳಲ್ಲಿ ದಾಟಿದ ಬೌಲರ್ ಎನ್ನುವ ಸಾಧನೆಯನ್ನೂ ಕಾಣಿಸಿದರು. ಹೀಗೇ ಮೆಲುಕುಹಾಕುತ್ತಾ ಹೋದರೆ ದಾಖಲೆಗಳ ಇನ್ನಷ್ಟು ಪುಟಗಳು ಮೂಡುತ್ತವೆ.

ಪ್ರತಿಕ್ರಿಯಿಸಿ: **feedback@sudha.co.in**


